ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಓ ಎಸ್ ಃ 280/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಎಮ್ ಆರ್ ನಾಗರಾಜ | ಪಿ ಡಬ್ಲ್ಯೂಃ | 1 |
| ತಂದೆಯ ಹೆಸರು | ಃ ಲೇಟ್ ರಾಮಣ್ಣ | ಡಿ ಡಬ್ಲ್ಯೂಃ | |
| ವಯಸ್ಸು | ಃ 46 ವರ್ಷ | ಪ್ರಮಾಣ ವಚನ ನೀಡಲಾದ | |
| ಉದ್ಯೋಗ | ಃ ತಹಶೀಲ್ದಾರರು | ದಿನಾಂಕಃ | 30.04.2014 |
| ವಾಸಸ್ಥಳ | ಃ ಹರಪನಹಳ್ಳಿ | | |

ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಬಿ ಆರ್ ಜಿ ವಕೀಲರಿಂದಃ

ನಾನು ದಿ.07.03.2014 ರಿಂದ ಇಲ್ಲಿಯವರೆಗೆ ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನ್ಯಾಯಾಲಯದ ಸಮನ್ಸ್ ಬಂದ ಮೇರೆಗೆ ಈ ದಾವೆಗೆ ಸಂಬಂಧಿಸಿದಂತೆ ಪ್ರತಿವಾದಿ ಪರ ವಕೀಲರು ಕೇಳಿದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 2011 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅನರ್ಹ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿ ವಿಶಾಲಕ್ಷಮ್ಮ ರವರ ಹೆಸರಿಗೆ ಮಂಜೂರಾದ ನಿವೇಶನದ ಸಂಖ್ಯೆ 183 ರ ಹಕ್ಕುಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದಲ್ದು ಅದನ್ನು ನಿಡಿ.3 ಎಂದು ಗುರುತಿಸಲಾಯಿತು. 2012 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿನ ಅರ್ಹರ ಫಲಾನುಭವಿಗಳ ಪಟ್ಟಿಯ ದೃಡಿಕೃತನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ ಸಂಪರ್ಕ ಕಲ್ಪಿಸಲು ಕೋರಿಕೊಂಡ ಪತ್ರ ಮತ್ತು ಪಲಾನುಭವಿಗಳ ಹೆಸರುಗಳ ಪಟ್ಟಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಸಿ ಜಿ ವಕೀಲರಿಂದ ಃ

ಮನೆ ಸಂಖ್ಯೆ.183 ಕ್ಕೆ ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳು ನಮ್ಮ ಕಛೇರಿಯಲ್ಲಿ ಲಭ್ಯ ಇರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

O.S:64/2011
D W : 1

ಸಿವಿಲ್ ಜಡ್ಜ್ , ಹರಪನಹಳ್ಳಿ.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕಃ 26.03.2015

ಮುಂದುವರೆದ ಮುಖ್ಯ ವಿಚಾರಣೆ ಃಪ್ರತಿವಾದಿ ಪರ ಶ್ರೀ ಬಿಹೆಚ್ ವಕೀಲರಿಂದ ಃ

ನಾನು ಈ ದಾವೆಯಲ್ಲಿ 1ನೇ ಪ್ರತಿವಾದಿ ಇರುತ್ತೇನೆ. ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ವಿಷಯ ನಿಜ ಮತ್ತು ಸತ್ಯ ಇರುತ್ತವೆ. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಹಾಜರುಪಡಿಸಿರುವ ಎಲ್ಲ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

ದಿ.15.2.1995 ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯ್ತು. ದಾವಾಸ್ತಿ ಸರ್ವೆ ನಂ.84ಃಬಿ ಆಸ್ತಿಗೆ ಸಂಬಂಧಿಸಿದ ರುಣಭಾರ ರಹಿತ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯ್ತು. ದಾವಾಸ್ತಿ ಸರ್ವೆ ನಂ.6ಃಡಿ ಗೆ ಸಂಬಂಧಿಸಿದ ಐದು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ.3 ರಿಂದ 7 ಎಂದು ಗುರುತಿಸಲಾಯ್ತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಕೆವಿ ವಕೀಲರಿಂದಃ

ನನ್ನ ಗಂಡ ತೀರಿಕೊಂಡು ಸುಮಾರು 20 ವರ್ಷಗಳಾಗಿರುತ್ತವೆ. ನನ್ನ ಗಂಡ ಜೀವಂತ ಇದ್ದಾಗ ನನ್ನ ಕುಟುಂಬಂಕ್ಕೆ ಐದು ಎಕರೆ ಜಮೀನು ಒಂದು ಮನೆ, ಒಂದು ಖಣ ಇತ್ತು. ನನಗೆ ನಾಲ್ಕು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಕೊಟ್ರಮ್ಮ ಎನ್ನುವವಳು ತೀರಿಕೊಂಡಿರುತ್ತಾಳೆ, ಉಳಿದವರು ಜೀವಂತ ಇರುತ್ತಾರೆ. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರವನ್ನು ನಾನೇ ಹೇಳಿ ಬರೆಸಿ ಹಾಕಿರುತ್ತೇನೆ. 4ನೇ ವಾದಿ ನಾಗಪ್ಪ ಈತನು ಅವನ ಮೊದಲನೇ ಹೆಂಡತಿಯನ್ನು ಬಿಡುಗಡೆ ಮಾಡಿಕೊಂಡು ಆಕೆಗೆ ಪರಿಹಾರ ಕೊಟ್ಟಿರುತ್ತಾನೆಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಾಗಪ್ಪ ಈತನು ಆಸ್ತಿಯಲ್ಲಿ ಭಾಗ ಪಡೆದುಕೊಂಡು ಆಕೆಗೆ ಪರಿಹಾರ ಕೊಟ್ಟಿರುತ್ತಾನೆ. ಸದರಿ ನಾಲ್ಕನೇ ವಾದಿ ನಾಗಪ್ಪ ಈತನು ಅವನ ಮೊದಲನೇ ಹೆಂಡತಿಯಿಂದ ಬಿಡುಗಡೆ ಮಾಡಿಕೊಂಡು ಸುಮಾರು 15 ವರ್ಷಗಳಾಗಿರುತ್ತವೆ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಯಾವ ದಿನಾಂಕ, ಯಾವ ತಿಂಗಳು ಮತ್ತು ಯಾವ ವರ್ಷ ಪಾಲುವಿಭಾಗ ಮಾಡಿಕೊಂಡಿದ್ದೀರಿ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೀರಿ ಎಂದರೆ ಸಾಕ್ಷಿಯು ಬರೆಸಿರುತ್ತೇನೆಂದು ಹೇಳುತ್ತಾರೆ. ನಾವು ಪಾಲುವಿಭಾಗ ಮಾಡಿಕೊಂಡು ಸುಮಾರು 15 ವರ್ಷಗಳಾಗಿರುತ್ತವೆ. 15 ವರ್ಷಗಳ ಹಿಂದೆ ನಾನು, ನನ್ನ ಮಕ್ಕಳು, ನನ್ನ ಗಂಡ ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಹೊಸದಾಗಿ ಯಾವುದೇ ಆಸ್ತಿಗಳನ್ನು ಖರೀದಿಸಿರುವುದಿಲ್ಲ ಎಂದರೆ ಸರಿ. ಎಲ್ಲಾ ಆಸ್ತಿಗಳು ನನ್ನ ಗಂಡನ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಸದರಿ ಪಾಲುವಿಭಾಗ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ಬರೆದಿರುತ್ತೇವೆ. ಸದರಿ ಪಾಲುವಿಭಾಗ ಪತ್ರದ ದಾಖಲೆಯ ಆಧಾರದ ಮೇಲೆ ಎಲ್ಲರೂ ತಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡಿಸಿರುತ್ತೀರಾ ಎಂದರೆ ಸಾಕ್ಷಿಯು ನಮಗೆ ಬಂದ ಹಿಸ್ಸೆಯ

ಆಸ್ತಿಯನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಸಿರುತ್ತೇನೆ ಅವರೂ ಕೂಡಾ ಹಿಸ್ಸೆಗೆ ಬಂದ ಆಸ್ತಿಗಳನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿಕೊಂಡಿರುತ್ತಾರೆ. ಈ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬದ ಜಮೀನುಗಳ ಸರ್ವೆನಂಬರ್ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನುಗಳ ಸರ್ವೆ ನಂಬರುಗಳನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಈಗ ಸದ್ಯ ನನ್ನ ಮಗಳು 2ನೇ ಪ್ರತಿವಾದಿ ರೇಣುಕಮ್ಮಳ ಮನೆಯಲ್ಲಿ ಸುಮಾರು ಮೂರು ವರ್ಷಗಳಿಂದ ವಾಸವಾಗಿರುತ್ತೇನೆ. ಸದರಿ ರೇಣುಕಮ್ಮಳ ಗಂಡ ಖಾಸಗಿ ಬಸ್ ಚಾಲಕನಿರುತ್ತಾನೆ. ಸದರಿ ರೇಣುಕಮ್ಮಳ ಗಂಡ ದಿನಾಲೂ ಕೆಲಸಕ್ಕೆ ಹೋಗಿ ಮತ್ತೆ ವಾಪಾಸ್ ಮನೆಗೆ ಬರುತ್ತಾನೆ. 2ನೇ ಪ್ರತಿವಾದಿ ರೇಣುಕಮ್ಮ ಇವಳಿಗೆ ಗಂಡನ ಮನೆಯಲ್ಲಿ ಆಸ್ತಿಗಳು ಇರುತ್ತವೆ. ದಾವಾಸ್ತಿಯಲ್ಲಿಯ 1 ಎಕೆರೆ 87 ಸೆಂಟ್ಸ್ ಜಮೀನನ್ನು 2ನೇ ಪ್ರತಿವಾದಿ ನನ್ನ ಮಗಳಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿ . ಆದರೆ ಸದರಿ ಮಾರಾಟ ಮಾಡಿದ ಹಣವನ್ನು ನಾನು ಪಡೆದಿರುವುದಿಲ್ಲ , ನನ್ನ ಮಕ್ಕಳಾದ 1ನೇ ಮತ್ತು 4ನೇ ವಾದಿಗಳು ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಾನು ಈ ರೀತಿ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲುನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

O.S:64/2011
D W : 1
Date: 28.03.2015

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು.  ದಿನಾಂಕಃ 28.03.2015

ಮುಂದುವರೆದ ಪಾಟೀ ಸವಾಲು ಃವಾದಿ ಪರ ಶ್ರೀ ಎಕೆಎ ವಕೀಲರಿಂದ ಃ

ನನ್ನ ತಕರಾರಿನಲ್ಲಿ ನಾನು ನನ್ನ ಮಕ್ಕಳು ನನ್ನಿಂದ ಹಣವನ್ನು ಪಡೆದಿರುತ್ತಾರೆಂದು ಹೇಳಿರುತ್ತೇನೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಣ್ಣುಮಕ್ಕಳ ಮದುವೆ ಸಮಯದಲ್ಲಿ ನನ್ನ ಗಂಡ ಜೀವಂತ ಇದ್ದರು. ನನ್ನ ಗಂಡ ತೀರಿಕೊಂಡ ನಂತರ ಮನೆಯ ಯಜಮಾನಿಕೆಯನ್ನು ನನ್ನ ಮಕ್ಕಳಾದ ನಾಗಪ್ಪ ಮತ್ತು ಪ್ರಭಪ್ಪ ಮಾಡುತ್ತಾರೆಂದರೆ ಸರಿ. ಸದರಿ ನನ್ನ ಮಕ್ಕಳು ಜಮೀನುಗಳಲ್ಲಿ ಬಿತ್ತುವುದು,

ಬೆಳೆಯುವುದು , ಸಾಲ ಪಡೆದುಕೊಳ್ಳುವುದು ಮತ್ತು ಕೊಡುವುದು ಅವರೇ ಮಾಡುತ್ತಾರೆಂದರೆ ಸರಿ. ನನ್ನ ಗಂಡ ತೀರಿಕೊಂಡ ಸಮಯದಲ್ಲಿ ನಮ್ಮ ಕುಟುಂಬದ ಆಸ್ತಿಗಳು ನನ್ನ ಗಂಡನ ಹೆಸರಿನಲ್ಲಿಯೇ ಇದ್ದವು ಎಂದರೆ ಸರಿ. ನಂತರ ಎಲ್ಲಾ ಆಸ್ತಿಗಳು ನನ್ನ ಹೆಸರಿಗೆ ಬದಲಾವಣೆಯಾಗಿರುತ್ತವೆ. ನನ್ನ ಗಂಡು ಮಕ್ಕಳ ಹೆಸರು ನನ್ನ ಹೆಸರಿನ ಜೊತೆ ಜಂಟಿಯಾಗಿ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿರುವುದಿಲ್ಲ. ದಾವಾಸ್ತಿಗಳ ಪೈಕಿ 84ಬಿ ವಿಸ್ತೀರ್ಣ 1.87 ಎಕರೆ ಮತ್ತು ಸರ್ವೆ ನಂ.6ಡಿ ವಿಸ್ತೀರ್ಣ 1.00 ಎಕರೆ ಜಮೀನುಗಳನ್ನು ನಾವೆಲ್ಲಾ ಒಟ್ಟು ಕುಟುಂಬದಲ್ಲಿದ್ದಾಗ ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ಗುರುಪಾದಪ್ಪ ಇವರಿಗೆ ಮಾರಾಟ ಮಾಡಿದ ಜಮೀನಿನ ಕುರಿತು ಕ್ರಯಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸರ್ವೆ ನಂ.84ಬಿ ವಿಸ್ತೀರ್ಣ 1.87 ಎಕೆರೆ ಜಮೀನಿನ ಕ್ರಯಪತ್ರಕ್ಕೆ ನನ್ನ ಮಕ್ಕಳಾದ ನಾಗಪ್ಪ ಮತ್ತು ಪ್ರಭಪ್ಪ ಸಹಿ ಮಾಡಿರುವುದಿಲ್ಲ. ನಾನು ಗುರುಪಾದಪ್ಪ ಇವರಿಗೆ ಸರ್ವೆ ನಂ.6ಡಿ ವಿಸ್ತೀರ್ಣ 1.00 ಎಕರೆ ಜಮೀನಿನನ್ನು ಕುರಿತು ಮಾರಾಟ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ 6ಡಿ ಸರ್ವೆ ನಂಬರ್ ಜಮೀನಿನನ್ನು ನಾಗಪ್ಪನ ಕುಟುಂಬವು ಸರಿಯಿಲ್ಲದ ಕಾರಣ ನಾವೆಲ್ಲರೂ ಕೂಡಿ ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ 6ಡಿ ಸರ್ವೆ ನಂಬರ ಆಸ್ತಿಯನ್ನು ನಾವೆಲ್ಲರೂ ಕೂಡಿ ಮಾರಾಟ ಮಾಡಿರುತ್ತೇವೆ ಆದ್ದರಿಂದ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.84ಬಿ2 ವಿಸ್ತೀರ್ಣ 1.87 ಎಕರೆ ಜಮೀನು ನನ್ನ ಹಿಸ್ಸೆಗೆ ಬಂದಿರುತ್ತದೆ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

ಸಿವಿಲ್ ಜಡ್ಜ್ , ಹರಪನಹಳ್ಳಿ.